ದಿನಾಂಕ 29.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ- ಶ್ರೀ ಎ.ಬಿ.ಕೆ ವಕೀಲರಿಂದಃ-**

ನಿಶಾನೆ ಪಿ 1 (ಎ) ಮತ್ತು 2 (ಎ) ಸಹಿಗಳು ಅರವಿನ್ ಕೆ.ಎ ರವರ ಸಹಿಗಳಲ್ಲ ಎಂದರೆ ಸರಿಯಲ್ಲ. ನಿ.ಪಿ 1 ಮತ್ತು 2 ರವರಲ್ಲಿರುವ ಬರವಣಿಗೆಗಳು ಅರವಿನ್ ಕೆ.ಎ ರವರ ಕೈ ಬರವಣಿಗೆಯಲ್ಲ. ಅರವಿನ್ ಕೆ.ಎ ರವರು ಕೋವಿಡ್ ಸಂದರ್ಭದಲ್ಲಿ ಮೃತರಾಗಿದ್ದು, ಅವರು ಮೃತರಾಗುವುದಕ್ಕಿಂತ ಒಂದು ವಾರದ ಹಿಂದಿನಿಂದಲೂ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿ. ಅರವಿನ್ ಕೆ.ಎ ರವರು ತಮ್ಮ ಕಾರಿನಲ್ಲಿ ಇಟ್ಟಿದ್ದಂತಹ ಖಾಲಿ ಚೆಕ್ಕುಗಳನ್ನು ಅವರ ಅನಾರೋಗ್ಯದ ಸಂದರ್ಭದಲ್ಲಿ ಅವರಿಗೆ ತಿಳಿಯದಂತೆ ತೆಗೆದುಕೊಂಡು ದುರ್ಬಳಕೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆದುದ್ದರಿಂದ ಅವರು ಮೃತರಾದ ಬಳಿಕ ನಾನು ನಿ.ಪಿ 1 ಮತ್ತು 2 ದಾಖಲೆಗಳನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಕೆ.ಎಸ್ ಮದು ರವರು ನನ್ನ ವಿರುದ್ದ ಚೆಕ್ ಬೌನ್ಸ್ ಪ್ರಕರಣವನ್ನು ಪೊನ್ನಂಪೇಟೆಯ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದ ಆದೇಶದ ಪುಟ ಮತ್ತು ಖಾಸಗೀ ಪಿಯರ್ಾದಿನ ದೃಡೀಕೃತ ನಕಲನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಡಿ 7 ಮತ್ತು 8 ಎಂದು ಗುರುತಿಸಲಾಯಿತು. ನಾನು ಕೆ ಎಸ್ ಮಧು ರವರಿಂದ ಸಾಲ ಪಡೆದಿರುವುದರಿಂದ ಅರವಿನ್ ಕೆ.ಎ ರವರಿಗೆ ಸಾಲ ನೀಡಲು ನನ್ನ ಬಳಿ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಅನೇಕ ಜನರ ಬಳಿ ಸಾಲ ಮಾಡಿ, ಸಾಲದ ಸುಳಿಯಲ್ಲಿ ಸಿಲುಕಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.